POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 1.2.2026

# ಅಣ್ಣಾವ್ರು ದೇವತಾ ಮನುಷ್ಯ ಆದದ್ದು ಏಕೆಂದರೆ...



'ಈ ತರನಾ ಊಟ ಹಾಕೋದು... ಆದರೆ ನಾನು ಈ ಊಟ ಮಾಡಲ್ಲ, ನನಗೆ ಊಟ ಬೇಡ!' ಎಂದು ಪ್ರೊಡಕ್ಷನ್ ಮ್ಯಾನೇಜರ್ ಮೇಲೆ ರೇಗಾಡಿದರು ಡಾ. ರಾಜ್‌ಕುಮಾರ್! ಅಣ್ಣಾವ್ರ ಈ ಹಠ ನೋಡಿ ಅಲ್ಲಿದ್ದ ಎಲ್ರೂ ಬೆಚ್ಚಿಬಿದ್ರು! ಅಂದು ಅಲ್ಲಿ ನಡೆದಿದ್ದು ಕಂಡು ಇಡೀ ಚಿತ್ರರಂಗವೇ ಬೆಚ್ಚಿಬಿದ್ದಿತ್ತು!

ಅದು 70ರ ದಶಕ. ಬಿಸಿಲ ನಾಡಿನಲ್ಲಿ 'ಗಂಧದ ಗುಡಿ' ಚಿತ್ರದ ಶೂಟಿಂಗ್ ನಡೆಯುತ್ತಿತ್ತು. ದಟ್ಟವಾದ ಕಾಡು, ಸುಡುವ ಬಿಸಿಲು, ನೂರಾರು ಜನ ಲೈಟ್ ಬಾಯ್ಸ್, ಸೆಟ್ ಹುಡುಗರು ಬೆವರು ಸುರಿಸಿ ಕೆಲಸ ಮಾಡುತ್ತಿದ್ದರು. ಮಧ್ಯಾಹ್ನ 1:30. ಊಟದ ಸಮಯ. ಹೊಟ್ಟೆ ತಾಳ ಹಾಕುತ್ತಿತ್ತು. 'ಬ್ರೇಕ್' ಎಂದು ನಿರ್ದೇಶಕರು ಹೇಳಿದ್ದೇ ತಡ, ಹಸಿದ ಕಾರ್ಮಿಕರೆಲ್ಲರೂ ಊಟದ ಸಾಲಿಗೆ ಓಡಿದರು. ಅತ್ತ ಕಡೆ, ಪ್ರೊಡಕ್ಷನ್ ಮ್ಯಾನೇಜರ್ ಒಬ್ಬರು ಅತೀ ಉತ್ಸಾಹದಿಂದ, ಒಂದು ದೊಡ್ಡ ಬೆಳ್ಳಿ ತಟ್ಟೆಯಂತಹ ಪಾತ್ರೆಯಲ್ಲಿ ಬಗೆಬಗೆಯ ಭಕ್ಷ್ಯಗಳನ್ನು, ತುಪ್ಪ ಸುರಿಯಲಾದ ಸ್ಪೆಷಲ್ ಬಿರಿಯಾನಿ, ಸ್ವೀಟ್ಸ್ ಎಲ್ಲವನ್ನೂ ಜೋಡಿಸಿಕೊಂಡು, ರಾಜಕುಮಾರ್ ಅವರು ವಿಶ್ರಾಂತಿ ಪಡೆಯುತ್ತಿದ್ದ ಟೆಂಟ್ ಕಡೆಗೆ ಓಡಿದರು. ಅಣ್ಣಾವ್ರಿಗೆ ರಾಜಾತಿಥ್ಯ ಕೊಡಬೇಕು ಎಂಬುದು ಆ ಮ್ಯಾನೇಜರ್ ಆಸೆ.

ರಾಜ್‌ಕುಮಾರ್ ಟೆಂಟ್ ಒಳಗೆ ಕುಳಿತಿದ್ದರು. ಮ್ಯಾನೇಜರ್ ನಗುತ್ತಾ, 'ಅಣ್ಣಾವ್ರೇ, ನಿಮಗೋಸ್ಕರ ಸ್ಪೆಷಲ್ ಊಟ. ಪಕ್ಕದ ಟೌನ್‌ನಿಂದ ನಿಮಗಂತಾನೇ ಮಾಡಿಸ್ಕೊಂಡು ಬಂದಿದ್ದೀನಿ' ಎಂದು ಟೇಬಲ್ ಮೇಲೆ ಇಟ್ಟರು. ಘಮಘಮಿಸುವ ಆ ಊಟ ನೋಡಿ ಯಾರಿಗಾದರೂ ಬಾಯಲ್ಲಿ ನೀರೂರುತ್ತಿತ್ತು. ರಾಜ್‌ಕುಮಾರ್ ಒಮ್ಮೆ ಆ ಊಟವನ್ನು ನೋಡಿದರು. ನಂತರ ಟೆಂಟ್ ಪರದೆಯನ್ನು ಸರಿಸಿ, ದೂರದಲ್ಲಿ ಬಿಸಿಲಿನಲ್ಲಿ ಸಾಲಾಗಿ ನಿಂತು ಅಲ್ಯೂಮಿನಿಯಂ ತಟ್ಟೆಯಲ್ಲಿ ನೀರು ಸಾಂಬಾರುಅನ್ನ ತಿನ್ನುತ್ತಿದ್ದ ಲೈಟ್ ಬಾಯ್ಸ್ ಕಡೆ ನೋಡಿದರು. ಕ್ಷಣಾರ್ಧದಲ್ಲಿ ಅಲ್ಲೊಂದು ಪ್ರಳಯವೇ ನಡೆದುಹೋಯ್ತು!

ಇದ್ದಕ್ಕಿದ್ದಂತೆ ರಾಜ್‌ಕುಮಾರ್ ಅವರ ಮುಖ ಕೆಂಪಾಯ್ತು. ಟೇಬಲ್ ಮೇಲಿದ್ದ ಆ ಸ್ಪೆಷಲ್ ಊಟದ ತಟ್ಟೆಯನ್ನು ಪಕ್ಕಕ್ಕೆ ತಳ್ಳಿ, ಗುಡುಗುವ ಧ್ವನಿಯಲ್ಲಿ ಕೂಗಿದರು. 'ಮ್ಯಾನೇಜರೇ... ಏನಿದು?'

ಮ್ಯಾನೇಜರ್ ಗಡಗಡ ನಡುಗುತ್ತಾ, 'ಸಾರ್.. ಅದು.. ನಿಮಗೋಸ್ಕರ ಸ್ಪೆಷಲ್ ಆಗಿ...' ಎಂದು ತೊದಲಿದರು.


ಆಗ ಅಣ್ಣಾವ್ರು ಆಡಿದ ಮಾತುಗಳು ಅಲ್ಲಿ ನೆರೆದಿದ್ದ ಪ್ರತಿಯೊಬ್ಬರ ಎದೆಯಲ್ಲೂ ನಾಟುವಂತಿತ್ತು. 'ನಾನೇನು ಆಕಾಶದಿಂದ ಇಳಿದು ಬಂದಿದ್ದೀನಾ? ಅಥವಾ ನಾನೇನು ಮಹಾರಾಜನ? ಬೆಳಿಗ್ಗೆಯಿಂದ ಬಿಸಿಲಲ್ಲಿ ಬೆವರು ಸುರಿಸಿ ಮೈಮುರಿದು ದುಡಿತಿರೋದು ಆ ಹುಡುಗರು. ಅವರಿಗೆ ಬರೀ ರಸಂ ಅನ್ನನಾ? ಫ್ಯಾನ್ ಕೆಳಗೆ ಕೂರೋ ನಮಗೆ ತುಪ್ಪದೂಟನಾ? ನಮಗೇನು ಎರಡು ಹೊಟ್ಟೆ ಇದ್ಯಾ ಮ್ಯಾನೇಜರೇ? ನಾಚಿಕೆಯಾಗಲ್ವಾ ನಿಮಗೆ?'


ಸೆಟ್‌ನಲ್ಲಿದ್ದ ನೂರಾರು ಜನ ಉಸಿರು ಬಿಗಿಹಿಡಿದು ನೋಡುತ್ತಿದ್ದರು. ಶಾಂತಮೂರ್ತಿ ಇಂದು ರೌದ್ರಾವತಾರ ತಾಳಿದ್ದರು.

ರಾಜ್‌ಕುಮಾರ್ ಅಷ್ಟಕ್ಕೇ ಸುಮ್ಮನಾಗಲಿಲ್ಲ. 'ಈಗಲೇ ಈ ಊಟವನ್ನು ಎತ್ತಾಕಿ. ಆ ಹುಡುಗರಿಗೆ ಏನು ಅಡುಗೆ ಮಾಡಿದ್ದೀರೋ, ಅದೇ ಅನ್ನಸಾಂಬಾರ್ ನನಗೂ ತನ್ನಿ. ನನ್ನ ಮನೆಯವರು (ಚಿತ್ರತಂಡದವರು) ಕಷ್ಟದ ಊಟ ಮಾಡ್ತಿದ್ರೆ, ನಾನಿಲ್ಲಿ ರಾಜಭೋಗ ಮಾಡೋಕೆ ಬಂದಿಲ್ಲ. ಇನ್ಮುಂದೆ ಈ ಸೆಟ್‌ನಲ್ಲಿ ಪ್ರತಿಯೊಬ್ಬರಿಗೂ ಒಂದೇ ಊಟ ಇರಬೇಕು. ಇಲ್ಲಾಂದ್ರೆ ನಾನು ಊಟ ಮುಟ್ಟೋದಿಲ್ಲ!' ಎಂದು ಖಡಕ್ ಎಚ್ಚರಿಕೆ ಕೊಟ್ಟರು! ಮರುಮಾತಾಡದ ಮ್ಯಾನೇಜರ್, ಆ ಲೈಟ್ ಬಾಯ್ಸ್ ತಿನ್ನುತ್ತಿದ್ದ ಅದೇ ಸಾಮಾನ್ಯ ಊಟವನ್ನು ತಂದುಕೊಟ್ಟರು. ರಾಜ್‌ಕುಮಾರ್ ಅದನ್ನು ತೃಪ್ತಿಯಿಂದ ಪ್ರೀತಿಯಿಂದ ಉಂಡರು. ಅಂದು ಅಣ್ಣಾವ್ರು ಹಾಕಿಕೊಟ್ಟ ಆ 'ಸಮಾನತೆಯ ಪಂಕ್ತಿ', ಇಂದಿಗೂ ಅವರ ಬ್ಯಾನರ್‌ನಲ್ಲಿ ಚಾಚೂ ತಪ್ಪದೆ ಪಾಲನೆಯಾಗುತ್ತಿದೆ.

ಹೀರೋಗೊಂದು ನ್ಯಾಯ, ಲೈಟ್ ಬಾಯ್ ಗೊಂದು ನ್ಯಾಯ ಅನ್ನೋದು ಅಣ್ಣಾವ್ರ ಡಿಕ್ಷನರಿಯಲ್ಲೇ ಇರಲಿಲ್ಲ. ಅದಕ್ಕೆ ಹೇಳೋದು, ಇಂಥವರು ನಟರಲ್ಲ, 'ದೇವತಾ ಮನುಷ್ಯ' ಎಂದು!









# ಅಂತಾರಾಷ್ಟ್ರೀಯ ಫಿಲ್ಮ್ ಫೆಸ್ಟಿವಲ್‌ನಲ್ಲಿ ರಾಜ್ ಚಿತ್ರಗಳ ಸುಗ್ಗಿ!

ಈ ಭಾರಿ 77ನೇ ಇಂಟರ್ ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಸಾಧು ಮಹಾರಾಜ್ ಮತ್ತು ಪ್ರಕಾಶ್ ರೈ ಸಾರಥ್ಯದಲ್ಲಿ ಲುಲು ಮಾಲ್‌ನಲ್ಲಿ ನಡೆಯುತ್ತಿದೆ. ಜನವರಿ 30ರಿಂದ ಫೆಬ್ರವರಿ 06 ರವರೆಗೆ ಸಿನಿಮಾ ಹಬ್ಬವಿದೆ. ಇಡೀ ಪ್ರಪಂಚದ ಸುಮಾರು 200 ಭಾಷೆಗಳ ಪ್ರಶಸ್ತಿ ಪುರಸ್ಕೃತ ಸಿನಿಮಾಗಳು ನೋಡಲು ಲಭ್ಯ. ಈ ಭಾರಿಯ ವಿಶೇಷ ಏನೆಂದರೆ, ಕನ್ನಡ ಚಿತ್ರಗಳು ಜಾಸ್ತಿಯಾಗಿಯೇ ಇದ್ದಾವೆ. ಅದರಲ್ಲೂ ಚಂದನವನದ ಎವರ್ ಗ್ರೀನ್ ಸೂಪರ್ ಸ್ಟಾರ್ ಡಾ. ರಾಜ್‌ಕುಮಾರ್ ಅಭಿನಯದ ಚಿತ್ರಗಳು ವೀಕ್ಷಕರ ಕಣ್ಮನ ಸೆಳೆಯುತ್ತಿರುವುದು.




ಭಕ್ತ ಕನಕದಾಸ, ಸಂಧ್ಯಾರಾಗ, ಬಂಗಾರದ ಮನುಷ್ಯ, ಪ್ರೇಮದ ಕಾಣಿಕೆ, ಶಂಕರ್‌ಗುರು, ಜೀವನ ಚೈತ್ರ... ಮುಂತಾದ ಸಿನಿಮಾಗಳು ಹೌಸ್‌ಫುಲ್!! ಈ ಪೈಕಿ ಬಂಗಾರದ ಮನುಷ್ಯ ಮತ್ತು ಪ್ರೇಮದ ಕಾಣಿಕೆ ಟೂರಿಂಗ್ ಟಾಕೀಸ್ ಶೈಲಿಯಲ್ಲಿ ಲುಲು ಮಾಲ್ ಮುಂಭಾಗದ ಆವರಣದಲ್ಲಿ ಸಾರ್ವಜನಿಕವಾಗಿ ಪ್ರದರ್ಶನ ಕಂಡವು. ಉಳಿದಂತೆ, ಸಾಹಸ ಸಿಂಹ ವಿಷ್ಣುವರ್ಧನ್ ಅವರ ಬಂಧನ, ದಿ. ಶಂಕರ್ ನಾಗ್ ಅಭಿನಯದ ಆಕ್ಸಿಡೆಂಟ್, ಏಳುಮಲೆ, ಮುಂಗಾರು ಮಳೆ, ಒಂದಾನೊಂದು ಕಾಲದಲ್ಲಿ, ತಾಯಿ ಸಾಹೇಬ, ಕನಸೆಂಬೋ ಕುದುರೆಯನೇರಿ, ಹೇಮಾವತಿ, ಮೃಗತೃಷ್ಣ, ಎಕ್ಸ್ ಅಂಡ್ ವೈ, ಎರಡೊಂದ್ಲಾ ಎರಡು... ಮುಂತಾದ ಕನ್ನಡ ಸಿನಿಮಾಗಳು ಪ್ರದರ್ಶನ ಕಾಣುತ್ತಿವೆ.




# ಗಿಲ್ಲಿ ಕೆಎಂಎಫ್ ಬ್ರಾಂಡ್ ಅಂಬಾಸಿಡರ್?!

ರಾಜ್ಯಾದ್ಯಂತ ಅಪಾರ ಜನಪ್ರಿಯತೆ ಗಳಿಸಿರುವ ಗಿಲ್ಲಿಯನ್ನು, ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ತನ್ನ ಉತ್ಪನ್ನಗಳ ಮುಖವಾಗಿ ಆಯ್ಕೆ ಮಾಡಲು ಮುಂದಾಗಿರುವ ಬಗ್ಗೆ ಚರ್ಚೆ ಜೋರಾಗಿದೆ. ವಿಶೇಷವಾಗಿ ನಂದಿನಿ ಹಾಲು ಹಾಗೂ ತುಪ್ಪಕ್ಕೆ ಬ್ರಾಂಡ್ ಅಂಬಾಸಿಡರ್ ಆಗಿ ಗಿಲ್ಲಿಯನ್ನು ನೇಮಕ ಮಾಡುವ ಕುರಿತು ಪ್ರಾಥಮಿಕ ಮಟ್ಟದ ಪೂರ್ವ ತಯಾರಿ ನಡೆಯುತ್ತಿದೆ ಎನ್ನಲಾಗಿದೆ. ಗಿಲ್ಲಿಗೆ ಸದ್ಯ ಇರುವ ಜನಮನ್ನಣೆ, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿಯೂ ಹೊಂದಿರುವ ವ್ಯಾಪಕ ಅಭಿಮಾನಿ ಬಳಗವೇ ಈ ನಿರ್ಧಾರಕ್ಕೆ ಪ್ರಮುಖ ಕಾರಣ ಎನ್ನಲಾಗುತ್ತಿದೆ. ಯುವಜನತೆ ಮಾತ್ರವಲ್ಲದೆ, ಕುಟುಂಬಮಟ್ಟದಲ್ಲಿಯೂ ಗಿಲ್ಲಿಯ ಹೆಸರು ಮನೆ ಮಾತಾಗಿರುವುದು ಕೆಎಂಎಫ್ ಗಮನ ಸೆಳೆದಿದೆ ಎಂಬ ಮಾಹಿತಿ ಲಭ್ಯವಾಗಿದೆ.



ಮೂಲಗಳ ಪ್ರಕಾರ, ಗಿಲ್ಲಿಗೆ ಲಕ್ಷಾಂತರ ರೂಪಾಯಿ ಸಂಭಾವನೆ ನೀಡುವ ಬಗ್ಗೆ ಕೂಡ ಚರ್ಚೆ ನಡೆದಿದೆ ಎನ್ನಲಾಗುತ್ತಿದೆ. ನಂದಿನಿ ಬ್ರಾಂಡ್‌ನ್ನು ಇನ್ನಷ್ಟು ಜನರ ಬಳಿಗೆ ತಲುಪಿಸುವ ಉದ್ದೇಶದಿಂದ, ವಿಶ್ವಾಸಾರ್ಹ ಮತ್ತು ಜನಸ್ನೇಹಿ ಮುಖವನ್ನು ಬಳಸಿಕೊಳ್ಳುವ ತಂತ್ರದ ಭಾಗವಾಗಿಯೇ ಈ ಯೋಚನೆ ಮೂಡಿದೆ ಎಂದು ಹೇಳಲಾಗುತ್ತಿದೆ. ಈವರೆಗೆ ಕೆಎಂಎಫ್ ಅಥವಾ ಗಿಲ್ಲಿ ತಂಡದಿಂದ ಯಾವುದೇ ಅಧಿಕೃತ ಘೋಷಣೆ ಹೊರಬಿದ್ದಿಲ್ಲ. ಆದರೆ ಈ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿದ್ದಂತೆ, ಅಭಿಮಾನಿಗಳು ಕುತೂಹಲದಿಂದ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದಾರೆ. 'ನಂದಿನಿಗೆ ಗಿಲ್ಲಿ ಸೂಕ್ತ ಆಯ್ಕೆ' ಎಂಬ ಅಭಿಪ್ರಾಯಗಳು ಕೂಡ ಹೆಚ್ಚಾಗಿ ಕೇಳಿಬರುತ್ತಿವೆ.

ಮುಂದಿನ ದಿನಗಳಲ್ಲಿ ಈ ಕುರಿತು ಅಧಿಕೃತ ಪ್ರಕಟಣೆ ಹೊರಬಿದ್ದರೆ, ರಾಜ್ಯದ ಡೈರಿ ಕ್ಷೇತ್ರದಲ್ಲೇ ಇದು ಗಮನಾರ್ಹ ಬೆಳವಣಿಗೆಯಾಗಿ ಪರಿಣಮಿಸುವ ಸಾಧ್ಯತೆ ಇದೆ. ಈಗಾಗಲೇ ನಂದಿನಿ ಬ್ರಾಂಡ್‌ಗೆ ಇರುವ ನಂಬಿಕೆಗೆ, ಗಿಲ್ಲಿಯ ಜನಪ್ರಿಯತೆ ಸೇರ್ಪಡೆಯಾದರೆ, ಅದು ಮತ್ತಷ್ಟು ಬಲಪಡೆಯುವುದರಲ್ಲಿ ಅನುಮಾನವೇ ಇಲ್ಲ.

Vol. 41 No. 35 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 cenewsreporter@gmail.com
http//policenews.news https://www.facebook.com/profile.php?id=61579674874846 ttps://www.instagram.com/police_news?igsh=MWJ6bHJwZDRmZDc1aQ==